# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು - 572 103

ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719


ಸಂಖ್ಯೆ: ತುವಿ:ಶೈವಿ:2017–18: 3286 ದಿನಾಂಕ: 23.12.2017

## ಸುತ್ತೋಲೆ

ವಿಷಯ: ಸ್ನಾತಕ ಸಿ ಬಿ ಸಿ ಎಸ್ ವಿನಿಯಮದ ಅಡಿಯಲ್ಲಿ Open Elective ವಿಷಯವನ್ನು ಬೋಧಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ: ಇಡಿ 28 ಯು ಟಿಜಿ 2016 ದಿನಾಂಕ: 16.06.2016

2) ತುಮಕೂರು ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಸಂಘದ ಮನವಿ ದಿನಾಂಕ: 12.12.2017

3) ಮಾನ್ಯ ಕುಲಪತಿಯವರ ಅನುಮೋದನೆ (ಕಂಡಿಕೆ-24) ದಿನಾಂಕ: 23.12.2017

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಪತ್ರದಂತೆ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಯೊಂದಿಗೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಸ್ನಾತಕ ಪದವಿ ಕೋರ್ಸುಗಳಿಗೆ 2016-17ನೇ ಸಾಲಿನಿಂದ ಸಿ ಬಿ ಸಿ ಎಸ್ ಪಠ್ಯಕ್ರಮವನ್ನ ಅಳವಡಿಸಿಕೊಳ್ಳಲಾಗಿದೆ. ಸದರಿ ಪಠ್ಯಕ್ರಮದ ನಾಲ್ಕನೇ ಸೆಮಿಸ್ಟರ್‌ನಲ್ಲಿ Open Elective ವಿಷಯಕ್ಕೆ ಸಂಬಂಧಿಸಿದ ಪಠ್ಯಕ್ರಮವನ್ನು ಬೋಧಿಸಬೇಕಾಗಿರುತ್ತದೆ.

ಸದರಿ Open Elective ವಿಷಯವನ್ನು ಎಲ್ಲಾ ಸ್ನಾತಕ ಪದವಿಗಳ ನಾಲ್ಕನೇ ಸೆಮಿಸ್ಟರ್‌ನಲ್ಲಿ ಕಡ್ಡಾಯವಾಗಿ ಸಿ ಬಿ ಸಿ ಎಸ್ ವಿನಿಯಮದಂತೆ ಈ ಕೆಳಕಂಡಂತೆ ಅಳವಡಿಸಕೊಳ್ಳಬೇಕಾಗಿರುತ್ತದೆ.

1. ಬೋಧನ ಅವಧಿ : 2hrs forTheory paper/4hrs for Practical
2. Credits : 2
3. ಪರೀಕ್ಷಾ ಅವಧಿ : 3 ಗಂಟೆ
4. ಒಟ್ಟು ಗರಿಷ್ಠ ಅಂಕಗಳು : 50
5. ಅಂತರಿಕ ಅಂಕಗಳು : 0

( ಸಿ ಬಿ ಸಿ ಎಸ್ ವಿನಿಯಮದ **Annexure : 1(a) ನ ಕ್ರಮ ಸಂಖ್ಯೆ 09, 2(a) ನ ಕ್ರಮ ಸಂಖ್ಯೆ 09, 3(a) ನ ಕ್ರಮ ಸಂಖ್ಯೆ 07, 4(a) ನ ಕ್ರಮ ಸಂಖ್ಯೆ 07, 5(a) ನ ಕ್ರಮ ಸಂಖ್ಯೆ 07, 6(a) ನ ಕ್ರಮ ಸಂಖ್ಯೆ 09** ಗಳನ್ನು ಅವಲೋಕಿಸಿ)

ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ Open Elective ವಿಷಯಕ್ಕೆ ಪಠ್ಯ ರಚನಾ ಸಮಿತಿಯು ಮೇಲ್ಕಂಡ ಅಂಶಗಳನ್ನು ಪರಿಗಣಿಸದೆ ಪಠ್ಯ ರಚನೆಯನ್ನು ಮಾಡಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತದೆ. ಅಂತಹ ಪಠ್ಯ ರಚನಾ ಸಮಿತಿಯವರು ಸಿ ಬಿ ಸಿ ಎಸ್ ವಿನಿಯಮವನ್ನು ಮತ್ತೊಮ್ಮೆ ಪರಿಶೀಲಿಸಿ ಮೇಲ್ಕಂಡ ಅಂಶಗಳಿಗಾನುಗುಣವಾಗಿ ದಿನಾಂಕ: 27.12.2017 ರೊಳಗೆ ತುರ್ತಾಗಿ ಪಠ್ಯ ವಿಷಯ, ಬೋಧನ ಅವಧಿ, ಗರಿಷ್ಠ ಅಂಕಗಳು ಮುಂತಾದ ಎಲ್ಲಾ ಅಂಶಗಳನ್ನು ವಿನಿಯಮದನ್ವಯ ಮತ್ತೋಮ್ಮೆ ಪರಿಶೀಲಿಸಿ ಪರಿಷ್ಕರಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಸೂಚಿಸಿದೆ.

ಪು.ತಿ.ನೊ

ವಿದ್ಯಾರ್ಥಿಗಳು Open Elective ಅಡಿಯಲ್ಲಿ ಆಯಾ ಕಾಲೇಜಿನಲ್ಲಿ ಲಭ್ಯವಿರುವ ಹಾಗೂ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ವಿಷಯಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರು ಅಗತ್ಯ ಕ್ರಮವನ್ನು ವಹಿಸತಕ್ಕದ್ದು. ವಿದ್ಯಾರ್ಥಿಗಳು ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿಷಯಗಳನ್ನು Open Elective ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದಲ್ಲ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿ, ಬೋಧನೆ, ಪರೀಕ್ಷಾ ಕಾರ್ಯ ಹಾಗೂ ಮೌಲ್ಯಮಾಪನವನ್ನು ಗಮನದಲ್ಲಿರಿಸಿ ಎಲ್ಲಾ ವಿದ್ಯಾರ್ಥಿಗಳು ಒಂದೇ ವಿಷಯವನ್ನು ಆಯ್ಕೆ ಮಾಡಿಕೊಳ್ಳದಂತೆ ಪ್ರಾಂಶುಪಾಲರು ಗಮನಹರಿಸಬೇಕು ಹಾಗೂ ಕಾಲೇಜಿನಲ್ಲಿ ಲಭ್ಯವಿರುವ ಕೊಠಡಿ, ಇನ್ನಿತರೆ ಸೌಲಭ್ಯ ಮತ್ತು ಲಭ್ಯವಿರುವ ಬೋಧಕ ಸಿಬ್ಬಂದಿಗಳನ್ನು ಗಮನದಲ್ಲಿರಿಸಿ ವಿದ್ಯಾರ್ಥಿಗಳು Open Elective ವಿಷಯವನ್ನು ಆಯ್ಕೆಮಾಡಿಕೊಳ್ಳಲು ಕಾಲೇಜಿನ ಪ್ರಾಂಶುಪಾಲರು ಕ್ರಮವಹಿಸತಕ್ಕದ್ದು.

ಮುಂದುವರೆದು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿ, ಸುಗಮ ಬೋದನಾ ಕಾರ್ಯ ನಿರ್ವಹಣೆ ಹಾಗೂ ಲಭ್ಯವಿರುವ ಸಂಪನ್ಮೂಲಗಳನ್ನು ಪರಿಗಣಿಸಿ ತಮ್ಮ ಕಾಲೇಜಿನ ವಿದ್ಯಾರ್ಥಿಗಳು ಆಯ್ಕೆಮಾಡಿಕೊಳ್ಳುವ ಎಲ್ಲಾ Open Elective ತರಗತಿಗಳು ಒಂದೇ ದಿನದಂದು ನಡೆಯುವಂತೆ ಪ್ರಾಂಶುಪಾಲರುಗಳು ಅಗತ್ಯ ಕ್ರಮವಹಿಸಬೇಕು.

ಸದರಿ Open Elective ಉತ್ತರ ಪತ್ರಿಕೆಗಳನ್ನು ಸಿ ಬಿ ಸಿ ಎಸ್ ವಿನಿಯಮದ ಕಂಡಿಕೆ 12.3 ರಂತೆ BOE Panel of Examiners ಪಟ್ಟಿಯಲ್ಲಿರುವ ಅರ್ಹ ಬೋಧಕರಿಂದ ಕಾಲೇಜು ಮಟ್ಟದಲ್ಲಿಯೇ ಮೌಲ್ಯಮಾಪನ ಮಾಡಿಸಿ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸುವ ಬಗ್ಗೆ ಅಗತ್ಯ ಕ್ರಮವಹಿಸಲು ಎಲ್ಲಾ ಪ್ರಾಂಶುಪಾಲರಿಗೆ ಸೂಚಿಸಿದೆ.

ಮೇಲ್ಕಂಡ ವಿಷಯದಲ್ಲಿ ಯಾವುದೇ ಗೊಂದಲ ಉಂಟಾದಲ್ಲಿ ಸಂಬಂಧಿಸಿದ ಪ್ರಾಂಶುಪಾಲರು ತುರ್ತಾಗಿ ವಿಶ್ವವಿದ್ಯಾನಿಲಯವನ್ನು ಸಂಪರ್ಕಿಸಿ ಅಗತ್ಯ ಮಾಹಿತಿಯನ್ನು ಪಡೆದು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಲು ಸೂಚಿಸಿದೆ. ಮುಂದುವರೆದು Open Elective ವಿಷಯವನ್ನು ಬೋಧನೆ ಮಾಡಲು ಕ್ರಮಕೈಗೊಂಡಿರುವ ಬಗ್ಗೆ, ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಿರುವ ಬಗ್ಗೆ, ವೇಳಾಪಟ್ಟಿಯನ್ನು ಸಿದ್ಧಪಡಿಸಿರುವ ಹಾಗೂ ಇನ್ನಿತರೆ ಅಗತ್ಯ ಕ್ರಮಕೈಗೊಂಡಿರುವ ಬಗ್ಗೆ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ಒಂದು ವಾರದೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ವಿಸ್ತೃತ ವರದಿಯನ್ನು ಸಲ್ಲಿಸುವುದು. ತಪ್ಪಿದಲ್ಲಿ ಈ ಸಂಬಂಧ ಉಂಟಾಗುವ ಯಾವುದೇ ತೊಂದರೆಗಳಿಗೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗಿರುವುದಿಲ್ಲ.

23-12-17
ಕುಲಸಚಿವರು

ಗೆ,

ಪ್ರಾಂಶುಪಾಲರು, ಘಟಕ ಹಾಗೂ ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಪ್ರತಿಯನ್ನು:

1. ಕುಲಸಚಿವರು (ಮೌ) ತುಮಕೂರು ವಿಶ್ವವಿದ್ಯಾನಿಲಯ ಇವರ ಮಾಹಿತಿಗಾಗಿ.
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

Sharing Pl upload on web site 26.12.17

C:\vd\kannada letters 2015.docx